# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :342 |
| ವಿಧಾನ ಪರಿಷತ್ತು ಸದಸ್ಯರ ಹೆಸರು | :ಶ್ರೀ ಗೋವಿಂದರಾಜು(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | :10.03.2025. |
| ಉತ್ತರಿಸುವ ಸಚಿವರು | :ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖಾ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಗ್ರಾಹಕರಿಗೆ ತೂಕ ಮತ್ತು ಅಳತೆಯಲ್ಲಿ ವಂಚಿಸುವ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಆ) | ಕಾನೂನು ಮಾಪನಶಾಸ್ತ್ರ, ಇಲಾಖೆಯಲ್ಲಿ ಕಳೆದ 5 ವರ್ಷದಿಂದ ಇಲ್ಲಿಯವರೆಗೂ ಎಷ್ಟು ಸ್ಥಳಗಳಲ್ಲಿ ದಾಳಿ ನಡೆಸಿ, ತಪಾಸಣೆ ಮಾಡಿ ಎಷ್ಟು ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ ಹಾಗೂ ದಂಡದ ರೂಪದಲ್ಲಿ ಸರ್ಕಾರಕ್ಕೆ ಸಂದಾಯವಾಗಿರುವ ಹಣವೆಷ್ಟು; | ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಹಾಯಕ ನಿಯಂತ್ರಕರುಗಳು ಹಾಗೂ ವಿಭಾಗ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿರೀಕ್ಷಕರುಗಳು ದಿ ಲೀಗಲ್ ಮೆಟ್ರಾಲಜಿ ಕಾಯಿದೆ 2009ರ ಸೆಕ್ಷನ್ 15 ರಡಿಯಲ್ಲಿ ಆಗಿಂದಾಗ್ಗೆ ತಪಾಸಣೆ ಕೈಗೊಳ್ಳುತ್ತಿದ್ದು, ತಪಾಸಣೆ ಸಂದರ್ಭದಲ್ಲಿ ಉಲ್ಲಂಘನೆ ಕಂಡು ಬಂದಲ್ಲಿ, ಮೊಕದ್ದಮೆ ಹೂಡಿ ಸದರಿಯವರಿಂದ ಅಭಿಸಂಧಾನ ಶುಲ್ಕವನ್ನು ವಸೂಲು ಮಾಡಲಾಗುತ್ತಿದೆ.<br><br>ಅದರಂತೆ 5 ವರ್ಷಗಳಲ್ಲಿ ನಡೆಸಲಾಗಿರುವ ತಪಾಸಣೆ, ಮೊಕದ್ದಮೆ ಮತ್ತು ಸಂಗ್ರಹಿಸಲಾದ ದಂಡದ ವಿವರಗಳು ಈ ಕೆಳಕಂಡಂತಿದೆ. |

| ವರ್ಷ | ನಡೆಸಲಾದ ತಪಾಸಣೆಗಳ ಸಂಖ್ಯೆ | ಹೂಡಲಾದ ಮೊಕದ್ದಮೆಗಳ ಸಂಖ್ಯೆ | ಸಂಗ್ರಹಿಸಲಾದ ಅಭಿಸಂಧಾನ ಶುಲ್ಕ(ರೂ.ಗಳಲ್ಲಿ) |
|---|---|---|---|
| 2019-20 | 56,482 | 21,846 | 5,76,08,400 |
| 2020-21 | 73,074 | 23,271 | 4,48,14,800 |
| 2021-22 | 89,281 | 26,431 | 6,62,83,745 |
| 2022-23 | 80,709 | 25,303 | 6,79,62,700 |
| 2023-24 | 73,876 | 16,806 | 6,06,21,750 |
| **ಒಟ್ಟು** | **3,73,422** | **1,13,657** | **30,72,91,395** |

(ಇ) ತೂಕ ಮತ್ತು ಅಳತೆಯಲ್ಲಿ ಮೋಸವಾಗುತ್ತಿರುವ ಬಗ್ಗೆ ಕಳೆದ 4 ವರ್ಷದಿಂದ ಸಾರ್ವಜನಿಕರಿಂದ ಬಂದಿರುವ ದೂರುಗಳ ಸಂಖ್ಯೆ ಎಷ್ಟು; ಗ್ರಾಹಕರಿಗೆ ಮೋಸ ಮಾಡುವ ವ್ಯಾಪಾರಿಗಳ ವಿರುದ್ಧ ಕ್ರಮಕೈಗೊಳ್ಳಲು ಇಲಾಖೆಯಲ್ಲಿ ಕಠಿಣ ನಿಯಮಗಳನ್ನು ರೂಪಿಸಲಾಗಿದೆಯೇ;

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಹಾಯಕ ನಿಯಂತ್ರಕರುಗಳು ಹಾಗೂ ವಿಭಾಗ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿರೀಕ್ಷಕರುಗಳು ದಿ ಲೀಗಲ್ ಮೆಟ್ರಾಲಜಿ ಕಾಯಿದೆ 2009ರ ಸೆಕ್ಷನ್ 15 ರಡಿಯಲ್ಲಿ ಆಗಿಂದಾಗ್ಗೆ ತಪಾಸಣೆ ಕೈಗೊಳ್ಳುತ್ತಿದ್ದು, ತಪಾಸಣೆ ಸಂದರ್ಭದಲ್ಲಿ ಒಂದು ವೇಳೆ ತೂಕ ಮತ್ತು ಅಳತೆಯ ಸಾಧನಗಳಲ್ಲಿ ದೋಷಗಳು ಕಂಡು ಬಂದಲ್ಲಿ ನಿಯಮಾನುಸಾರ ಮೊಕದ್ದಮೆ ಹೂಡಿ ಸದರಿಯವರಿಂದ ಅಭಿಸಂಧಾನ ಶುಲ್ಕವನ್ನು ಭರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ನಿರಾಕರಿಸುವವರ ವಿರುದ್ಧ ಸಂಬಂಧಿಸಿದ ಕ್ಷೇತ್ರ ವ್ಯಾಪ್ತಿಯ ಜೆ.ಎಂ.ಎಫ್.ಸಿ/ಎಂ.ಎಂ.ಟಿ.ಸಿ/ಜಿಲ್ಲಾ ಸೆಷನ್ಸ್ ನ್ಯಾಯಾಲಯದಲ್ಲಿ ದಾವೆ ಹೂಡಿ ಮಾನ್ಯ ನ್ಯಾಯಾಲಯದ ಆದೇಶದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ತೂಕ ಮತ್ತು ಅಳತೆಯಲ್ಲಿ ಮೋಸವಾಗುತ್ತಿರುವ ಬಗ್ಗೆ ಕಳೆದ 4 ವರ್ಷದಿಂದ ಸಾರ್ವಜನಿಕರಿಂದ ಬಂದಿರುವ ದೂರುಗಳ ಸಂಖ್ಯೆ ಈ ಕೆಳಕಂಡಂತಿದೆ.

| **ವರ್ಷ** | **ಸ್ವೀಕರಿಸಲಾದ ದೂರುಗಳ ಸಂಖ್ಯೆ** |
|---|---|
| 2020-21 | 45 |
| 2021-22 | 32 |
| 2022-23 | 56 |
| 2023-24 | 49 |
| ಒಟ್ಟು | 182 |

(ಈ) ಗ್ರಾಹಕರ ತೂಕ ಮತ್ತು ಅಳತೆಯಲ್ಲಿ ಇಲಾಖೆಯ ನಿಯಮದಡಿಯಲ್ಲಿ ಯಾವ ಯಾವ ಪ್ರಕರಣಗಳನ್ನು ಹಿಡಿಯಲು ಸರ್ಕಾರದಿಂದ ಅನುಮತಿ ನೀಡಲಾಗಿದೆ?

ಕಾನೂನು ಮಾಪನಶಾಸ್ತ್ರ ಇಲಾಖೆಯಲ್ಲಿ ತೂಕ ಮತ್ತು ಅಳತೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಪ್ರಕರಣಗಳನ್ನು ಹಿಡಿಯಲು ಅನುಮತಿ ನೀಡಲಾಗಿದೆ.

- ನಿಗಧಿತ ಅವಧಿಯಲ್ಲಿ ತೂಕ ಮತ್ತು ಅಳತೆ ಸಾಧನಗಳನ್ನು ಸತ್ಯಾಪನೆ ಮತ್ತು ಮುದ್ರೆ ಮಾಡದೇ ಇರುವುದು.
- ಕಡಿಮೆ ತೂಕ ಮತ್ತು ಅಳತೆ ವಿತರಣೆ ಬಗ್ಗೆ.
- ತೂಕ ಮತ್ತು ಅಳತೆ ಸಾಧನಗಳನ್ನು Alteration/ Tamper ಮಾಡುವ ಬಗ್ಗೆ.
- ಸತ್ಯಾಪನಾ ಪ್ರಮಾಣ ಪತ್ರವನ್ನು ಅಂಗಡಿಗಳಲ್ಲಿ ಪ್ರದರ್ಶಿಸದೇ ಇರುವ ಬಗ್ಗೆ.
- ಪೊಟ್ಟಣ ರೂಪದಲ್ಲಿ ಸಿಗುವ ಎಲ್ಲಾ ಪದಾರ್ಥಗಳ ಬಗ್ಗೆ ನಿಗಧಿತ ಘೋಷಣೆಗಳನ್ನು ನಮೂದಿಸದೇ ಇರುವ ಬಗ್ಗೆ/ನಿವ್ವಳ ತೂಕ ಇಲ್ಲದೇ ಇರುವ ಬಗ್ಗೆ.

ಆನಾಸ 23 ಕಾಮಾಸೇ 2025

(ಕೆ.ಹೆಚ್ ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು
ಮಾಪನಶಾಸ್ತ್ರ ಇಲಾಖಾ ಸಚಿವರು.